ದಿಃ19.04.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಸ್.ಎನ್.ಜಿ., ವಕೀಲರಿಂದಃ

1. ಸರ್ವೆ ನಂಬರ್ 56/2 ರಲ್ಲಿ ನನ್ನ ಅತ್ತೆಯ ಹೆಸರಿನಲ್ಲಿ ಜಮೀನು ಮಂಜೂರಾಗಿರುತ್ತದೆ.

2. ಅದರ ಸೈಟ್ ನಂಬರ್ ನನಗೆ ಗೊತ್ತಿರುವುದಿಲ್ಲ.

3. ಸದರಿ ಸೈಟಿನ ವಿಸ್ತೀರ್ಣ ಎಷ್ಟು ಎಂದು ಕೇಳಿದರೆ ನನಗೆ ಅದು ಅರ್ಥ ಆಗುವುದಿಲ್ಲ ಎಂದು ಹೇಳುತ್ತೇನೆ.

4. ಚಾಸಾ.2 ನನ್ನ ಮೈದುನ ಎಂಬುದು ಸರಿ.

5. ಚಾಸಾ.3 ಮತ್ತು 5 ನನ್ನ ಸಂಬಂಧಿಕರು ಎನ್ನುವುದು ಸರಿ.

6. ಚಾಸಾ.10, 12 ಮತ್ತು 13 ಸಹ ನನ್ನ ಸಂಬಂಧಿಕರು ಎನ್ನುವುದು ಸರಿ.

7. ನಾನು ವಾಸ ಮಾಡುವುದು ಉಜ್ಜನಹಳ್ಳಿ ಗ್ರಾಮದಲ್ಲಿ ಎನ್ನುವುದು ಸರಿ.

8. ಸದರಿ ಸರ್ವೆ ನಂಬರ್ ಜಮೀನು ಉಜ್ಜನಹಳ್ಳಿ ಗ್ರಾಮದಿಂದ 2 ಕಿಮೀ ಅಂತರದಲ್ಲಿ ಇರುತ್ತದೆ ಎನ್ನುವುದು ಸರಿ.

9. ಸದರಿ ಸರ್ವೆ ನಂಬರ್ 56/2 ರ ಪಕ್ಕದಲ್ಲಿಯೇ ಆರೋಪಿತರ ತಾಯಿಯಾದ ಗೌರಮ್ಮ ಇವಳಿಗೆ ಸಂಬಂಧಿಸಿದ ಸರ್ವೆ

ನಂಬರ್ 56/1 ಜಮೀನು ಇರುತ್ತದೆ ಎನ್ನುವುದು ಸರಿ.

10. ಸದರಿ ಸರ್ವೆ ನಂಬರ್‌ನಲ್ಲಿ ಸದರಿ ಗೌರಮ್ಮಳಿಗೆ 1 ಎಕರೆ 18 ಗುಂಟೆ ಜಮೀನು ಇರುತ್ತದೆ ಎಂದರೆ, ಈ ಗಲಾಟೆಯಾದ ನಂತರ ಆ ರೀತಿ ಮಾಡಿಕೊಂಡಿರುತ್ತಾಳೆ ಎಂದು ಹೇಳುತ್ತೇನೆ.

11. ಸದರಿ 1 ಎಕರೆ 18 ಗುಂಟೆ ಜಮೀನು ಆರೋಪಿತರ ತಾಯಿಯ ಮನೆತನದ ಆಸ್ತಿಯಾಗಿದ್ದು, ಮೊದಲಿನಿಂದಲೂ ಅವರದ್ದೇ ಆಗಿರುತ್ತದೆ ಎನ್ನುವುದು ಸರಿ.

12. ಆರೋಪಿತರು ತಮ್ಮ ಜಮೀನಿನ ಅಳತೆ ಮಾಡಿ ಹದ್ದುಬಸ್ತನ್ನು ದಿಃ04.02.2020 ರಂದು ಮಾಡಿಸಿರುತ್ತಾರೆ ಎನ್ನುವುದು ಸರಿ.

13. ಸದರಿ ಅಳತೆಯ ವರದಿಯ ಪ್ರಕಾರ, ನಾನು, ಮಂಗಳಮ್ಮ, ಚಾಸಾ.5 ಈತನ ಹೆಂಡತಿಯಾದ ಗೌರಮ್ಮ, ಚಾಸಾ.13 ಈತನ ಹೆಂಡತಿಯಾದ ಚನ್ನಮ್ಮ ಎಲ್ಲರೂ ಆರೋಪಿತರಿಗೆ ಸಂಬಂಧಿಸಿದ 1 ಎಕರೆ 18 ಗುಂಟೆ ಜಮೀನಿನಲ್ಲಿ ಅತಿಕ್ರಮ ಮಾಡಿ ಮನೆ ಕಟ್ಟಿಕೊಂಡಿರುತ್ತೇವೆ ಎನ್ನುವುದು ಸರಿಯಲ್ಲ.

14. ಆ ಕಾರಣಕ್ಕೆ ನಾವೆಲ್ಲರೂ ಗುಂಪುಗಾರಿಕೆ ಮಾಡಿಕೊಂಡು ಒಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇವೆ ಎನ್ನುವುದು ಸರಿಯಲ್ಲ.

15. ಆರೋಪಿತರ ತಾಯಿ ಅವರ ಜಮೀನಿನಲ್ಲಿ ನಾವು ಅತಿಕ್ರಮಣ ಮಾಡಿರುವುದರ ವಿಚಾರವಾಗಿ ಚನ್ನಪಟ್ಟಣದ ಸಿವಿಲ್ ನ್ಯಾಯಾಲಯದಲ್ಲಿ ನನ್ನ, ಮಂಗಳಮ್ಮ, ಚನ್ನಮ್ಮ, ಗೌರಮ್ಮ ಇವರ ವಿರುದ್ಧ ಓ.ಎಸ್.ನಂಬರ್.180/2023ನ್ನು ಹೂಡಿರುತ್ತಾರೆ ಎನ್ನುವುದು ಸರಿ.

16. ಸದರಿ ದಾವೆಯಲ್ಲಿ ನಮ್ಮ ವಿರುದ್ಧ ಆರೋಪಿತರ ತಾಯಿ ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆದಿರುತ್ತಾರೆ ಎನ್ನುವುದು ಸರಿಯಲ್ಲ.

17. ಉಜ್ಜನಹಳ್ಳಿ ಕಾಲೋನಿ ಸರ್ವೆ ನಂಬರ್.56/2ರಲ್ಲಿ 1 ಎಕರೆ 6 ಗುಂಟೆ ಜಮೀನಿನ ಪೈಕಿ ನನ್ನ ಅತ್ತೆ ಸಿದ್ದಮ್ಮ ಗಂಡ ಬೋರಯ್ಯ ಇವಳ ಹೆಸರಿನಲ್ಲಿ ಮಂಜೂರು ಆಗಿರುವುದಿಲ್ಲ ಎನ್ನುವುದು ಸರಿಯಲ್ಲ.

18. ಸದರಿ ಜಮೀನಿನಲ್ಲಿ ಮಂಜೂರಾತಿ ಆಗದೇ ಇದ್ದರೂ ಸಹ, ನಾವೇ ಆರೋಪಿತರಿಗೆ ಸಂಬಂಧಿಸಿದ ಸರ್ವೆ ನಂಬರ್ 56/1ರಲ್ಲಿ ಅತಿಕ್ರಮಣ ಮಾಡಿ ವಾಸ ಮಾಡುತ್ತಿದ್ದೇವೆ ಎನ್ನುವುದು ಸರಿಯಲ್ಲ.

19. ಆರೋಪಿತರಿಗೆ ಸಂಬಂಧಿಸಿದ ಜಮೀನು ಇದ್ದು, ಅಲ್ಲಿ ಅವರು ಹೋಗಿ ಬರುತ್ತಿದ್ದುದ್ದರಿಂದ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಮ್ಮ ಜಾತಿಯನ್ನು ಮುಂದೆ ಇಟ್ಟುಕೊಂಡು ಅವರು ಜಾತಿನಿಂದನೆ ಮಾಡಿರುತ್ತಾರೆ ಎಂದು ಸುಳ್ಳು ಅಪವಾದ

ಹೊರಿಸಿರುತ್ತೇವೆ ಎನ್ನುವುದು ಸರಿಯಲ್ಲ.

20. ನಿ.ಪಿ.1ನ್ನು ಪೊಲೀಸರೇ ಬರೆದಿರುತ್ತಾರೆ.

21. ಅದರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡು ನನ್ನ ಬೆರಳು ಮುದ್ರೆಯನ್ನು ಹಾಕಿರುತ್ತೇನೆ.

22. ಅಕ್ಕೂರು ಪೊಲೀಸರು ಸ್ಥಳಕ್ಕೆ ಸಾಯಂಕಾಲ 4.30ರ ಸಮಯದಲ್ಲಿ ಬಂದಿದ್ದರು.

23. ಆ ಸಮಯದಲ್ಲಿ ನಮ್ಮ ಕಡೆಯವರು ಮತ್ತು ಅವರ ಕಡೆಯವರು ಎಲ್ಲರೂ ಇದ್ದರು.

24. ಅಲ್ಲಿ ಪೊಲೀಸರು ಬಂದು ಇಬ್ಬರಿಗೂ ಬೈದು, ಗಲಾಟೆ ಮಾಡದಂತೆ ಎಚ್ಚರಿಗೆ ನೀಡಿ ಹೋಗಿರುತ್ತಾರೆ.

25. ತೆಂಗಿನಕಾಯಿ ಕಿತ್ತುಕೊಳ್ಳಿ ಎಂದೂ ಸಹ ಹೇಳಿ ಪೊಲೀಸರು ಹೋಗಿರುತ್ತಾರೆ.

26. ಆ ಸಮಯದಲ್ಲಿ ಪೊಲೀಸರು ಫೋಟೋ ತೆಗೆದಿದ್ದು, ಆ ಸಮಯದಲ್ಲಿ ಚಾಸಾ.5, ಚಾಸಾ.12, ಮತ್ತು 13 ಸಹ ಇದ್ದರು.

27. ಆಗ ಸಮಯ ಮಧ್ಯಾಹ್ನ 2.00 ಗಂಟೆ ಆಗಿತ್ತು.

28. ಆ ದಿನ ಯಾವ ತಾರೀಖು ಇತ್ತು ಎಂಬುದು ನನಗೆ ಗೊತ್ತಿಲ್ಲ.

29. ಆ ಸಮಯದಲ್ಲಿ ಪೊಲೀಸರು ಬರೆದುಕೊಂಡಿರುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ.

30. ಪೊಲೀಸರು ಅಲ್ಲಿಗೆ ಬಂದಿದ್ದಾಗ ನನ್ನ ಸಹಿಯನ್ನು ಪಡೆದಿರುತ್ತಾರೆ.

31. ನನ್ನನ್ನು ಹೊರತುಪಡಿಸಿ ಬೇರೆ ಯಾರಿಂದಲೂ ಸಹಿಯನ್ನು ಪಡೆದಿರುವುದಿಲ್ಲ.

32. ನಾನು ನಿ.ಪಿ.2ರ ಮೇಲೆ ಪೊಲೀಸ್ ಠಾಣೆಯಲ್ಲಿ ಬೆರಳು ಮುದ್ರೆ ಹಾಕಿರುತ್ತೇನೆ ಎನ್ನುವುದು ಸರಿ.

33. ನಿ.ಪಿ.2ರಲ್ಲಿ ಏನು ಬರೆದಿರುತ್ತಾರೆ ಎಂಬುದು ನನಗೆ ಮಾಹಿತಿ ಇಲ್ಲ ಎನ್ನುವುದು ಸರಿ.

34. ಚಾಸಾ.2, 3, 5, 10, 12 ಮತ್ತು 13 ನನ್ನ ಸಂಬಂಧಿಕರಾಗಿರುವುದರಿಂದ, ಅವರು ನನಗೆ ಸಹಾಯ ಮಾಡುತ್ತಿದ್ದಾರೆ ಎನ್ನುವುದು ಸರಿಯಲ್ಲ.

35. ಚಾಸಾ.2 ನನ್ನ ಮೈದ ನಿವೃತ್ತ ಸರ್ಕಾರಿ ನೌಕರಸ್ಥನಾಗಿ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾನೆ ಎನ್ನುವುದು ಸರಿ.

36. ಆರೋಪಿತರು ನನ್ನ ವಿರುದ್ದ ಯಾವುದೇ ರೀತಿಯ ದೌರ್ಜನ್ಯ ಮಾಡುವುದಾಗಲೀ, ಅವಾಚ್ಯ ಶಬ್ದಗಳಿಂದ ಬೈಯ್ಯುವುದಾಗಲೀ, ಜಾತಿ ನಿಂದನೆ ಮಾಡುವುದಾಗಲೀ, ಇತ್ಯಾದಿ ಮಾಡದೇ ಇದ್ದರೂ ಸಹ, ಅವರ ವಿರುದ್ದ ಒಂದು ಸುಳ್ಳು ಜಾತಿ

ನಿಂದನೆ ಪ್ರಕರಣವನ್ನು ಹೂಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.